ಗಳನ್ನು ಕಟ್ಟಿಸಲು ಈ ಯೋಜನೆಯಲ್ಲಿ ಅವಕಾಶಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮನೆ ಕಟ್ಟಿಕೊಳ್ಳಬೇಕೆಂದು ಬಂದರೆ ಈ ಸ್ಕೀಮಿನಲ್ಲಿ ಅವಕಾಶವಿದೆ.

ಶ್ರೀ ಎಸ್. ಗೋಪಾಲಗೌಡ —ಹಾಗಲ್ಲ. ಒಂದು ಊರಿನಲ್ಲಿ ಆಸ್ಪತ್ರೆಯಿರುತ್ತದೆ, ಡಾಕ್ಟರಿಗೆ ವಾಸಕ್ಕೆ ಮನೆಯಿರುವುದಿಲ್ಲ. ಅಂಥ ಸ್ಥಳಗಳೆಷ್ಟಿವೆಯೆಂಬುದನ್ನು ನೋಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ಬೇಕಾದರೆ ಕಟ್ಟಿಸಬಹುದು. ಅದಕ್ಕೆ ಈ ಸ್ಕೀಮು ಅನ್ವಯಿಸುವುದಿಲ್ಲ.

Kanva Reservoir (Feeding from Mari Halla).

Q.—234. Sri V. VENKATAPPA (Channapatna).—

Will the Government be pleased to state :—

(*a*) whether it is not a fact that the Government have approved of the scheme for feeding Kanva Reservoir from Mari Halla ;

(*b*) what is the preliminary estimate of the scheme;

(*c*) whether the final estimate is made and when the work will be taken up ?

A.—Sri H. M. CHANNABASAPPA (Minister for Industries).—

(*a*) No.

(*b*) Rs. 5·5 lakhs.

(*c*) Not yet; the question of taking up the work will arise after the final estimate is prepared and sanctioned.

ಶ್ರೀ ವಿ. ವೆಂಕಟಪ್ಪ.—ಈ ವಿಚಾರದಲ್ಲಿ ಒಂದು ಗೆಜೆಟ್ ನೋಟಿಫಿಕೇಷನ್ ಆಗಿ ರೈತರು ಹೆಚ್ಚಾಗಿ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡುವುದಕ್ಕೆ ಮುಚ್ಚಳಿಕೆ ಬರೆದುಕೊಡಬೇಕೆಂದು ಕೇಳಿಲ್ಲವೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿದೆ.

ಶ್ರೀ ವಿ. ವೆಂಕಟಪ್ಪ.—ಮೊದಲನೆಯ ಪ್ರಶ್ನೆಯಲ್ಲಿ ಸರ್ಕಾರ ಅನುಮೋದಿಸಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿರುವುದೇಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಪ್ರಶ್ನೆ

> "whether it is not a fact that the Government have approved of the scheme for feeding Kanva Reservoir from Mari Halla"

ಎಂಬುದಾಗಿರುವುದರಿಂದ ಅದು approve ಆಗಿಲ್ಲವೆಂದು ಹೇಳಿದೆ.

ಶ್ರೀ ವಿ. ವೆಂಕಟಪ್ಪ.—Approve ಆಗದೆ ಗೆಜೆಟ್ ನೋಟಿಫಿಕೇಷನ್ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೆಜೆಟ್ ನೋಟಿಫಿಕೇಷನ್ ಮಾಡಿ ರೈತರು ಹೆಚ್ಚಾದ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡಲು ಒಪ್ಪುವರೇ, ಅವರಿಗೆ ಸಾಧ್ಯವೇ, ತಕರಾರೇನಾದರೂ ಇದೆಯೇ ಎಂದು ವಿಚಾರಿಸಿ ಆಮೇಲೆ ನಾವು ಮುಂಜೂರು ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಮುಂಜೂರು ಮಾಡುವುದಕ್ಕೇನು ಕಾರ್ಯಕ್ರಮ ಕೈಕೊಳ್ಳಲಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುಂಜೂರಾಗುವುದಕ್ಕೆ ಕೆಲವು ತೊಂದರೆಗಳಿವೆ. ರೈತರು ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡುವುದಿಲ್ಲವೆಂದು ತಕರಾರು ಮಾಡಿರುವುದು ಒಂದು ಕಾರಣ. ಮತ್ತೊಂದು ಅರ್ಕಾವತಿ ವ್ಯಾಲಿ ನೀರನ್ನು, ಅಲ್ಲಿಯೇ ಜಮೀನು ಸಿದ್ಧವಾಗಿರುವಾಗ ಅದನ್ನು ಬಿಟ್ಟು, ಇನ್ನೊಂದು ವ್ಯಾಲಿಗೆ ಡೈವರ್ಟ್ ಮಾಡುವುದು ನೀತಿಯುತವಾಗಿದೆಯೇ ಎಂಬುದನ್ನು ಪರ್ಯಾಲೋಚಿಸಬೇಕಾದ್ದು.

ಶ್ರೀ ವಿ. ವೆಂಕಟಪ್ಪ.—ಅಂದಾಜು 505 ಲಕ್ಷ ರೂಪಾಯಿಗಳಿಗೆ ತಯಾರಾಗಿರುವುದರಿಂದ ಪರ್ಯಾಲೋಚಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜು 5·5 ಲಕ್ಷ ರೂಪಾಯಿಗಳಿಗೆ ತಯಾರಾಗಿರುವುದು, 505 ಲಕ್ಷಕ್ಕಲ್ಲ. ಅಂದಾಜು ತಯಾರಾಗಬೇಕೆಂದು ಹೇಳಿದಮೇರೆಗೆ ರಿಸರ್ವಾಯರ್‌ಗೆ ಅಂದಾಜು ಮಾಡಲಾಯಿತು. ಅದನ್ನು ಮುಂಜೂರುಮಾಡುವಾಗ ಸಾಧಕ ಬಾಧಕ, ಕಷ್ಟನಷ್ಟ ಪರಿಶೀಲಿಸಿ ಆಮೇಲೆ ಮುಂಜೂರು ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಈ ಕೆಲಸ ತೆಗೆದುಕೊಳ್ಳಲು ಏರ್ಪಾಡುಮಾಡುತ್ತೀವೆ, 10 ಲಕ್ಷ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ ಎಂದು ಮುಖ್ಯಮಂತ್ರಿಗಳು ಹೋದನಲ ಹೇಳಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನನಗೆ ಗೊತ್ತಿಲ್ಲ.

Reservoir near Thimmammanahalli (Construction).

Q.—269. Sri MALI MARIAPPA (Pavagada).—

Will the Government be pleased to state :—

(*a*) whether an estimate for constructing a reservoir near Thimmammanahalli, Nagalmadike Hobli, Pavagada Taluk is prepared ;

(*b*) whether the same is included in the Second Five-Year Plan ?

A.—Sri H. M. CHANNABASAPPA (Minister for Industries).—

(*a*) Yes.

(*b*) No.

ಶ್ರೀ ಮಾಲ ಮರಿಯಪ್ಪ.—ಅಂದಾಜನ್ನು ಎಷ್ಟು ಮೊತ್ತಕ್ಕೆ ಮಾಡಿದ್ದೀರಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—12 ಲಕ್ಷ ರೂಪಾಯಿಗಳಿಗೆ.

ಶ್ರೀ ಮಾಲ ಮರಿಯಪ್ಪ.—ನುಮಾರು ಎಷ್ಟು ಎಕರೆ ಅಚ್ಚುಕಟ್ಟಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಸಾವಿರ ಎಕರೆ.

ಶ್ರೀ ಮಾಲ ಮರಿಯಪ್ಪ.—ಈಗ ನುಮಾರು ನಾಲ್ಕು ವರ್ಷಗಳಿಂದ ಆ ಕಡೆಯ ರೈತರು ಇದು ಅಗತ್ಯವಾಗಿ ಆಗಬೇಕೆಂದು ಆಗಾಗ್ಗೆ ಕೇಳುತ್ತಿದ್ದಾರಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗಬೇಕೆಂದು ಒತ್ತಾಯಮಾಡುತ್ತಿರುವುದು ನಿಜ.

ಶ್ರೀ ಮಾಲ ಮರಿಯಪ್ಪ.—ಇದನ್ನು ಬಹಳ ಹೆಚ್ಚಿನ ಮಟ್ಟದ್ದಾಗಿರುವುದರಿಂದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಅನಿವಾರ್ಯವೇನಿತ್ತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡುಮೂರು ಅನಿವಾರ್ಯವಿದೆ. ಒಂದು ಇದಕ್ಕಿಂತಲೂ ಕೂಡ ಇನ್ನೂ ಹೆಚ್ಚು ಪ್ರಯಾರಿಟಿಯಿರುವ ಕೆಲಸಗಳನ್ನು ದೃಷ್ಟಿಯಲ್ಲಿಟ್ಟಿರುವುದು, ಇನ್ನೊಂದು ಟಾರ್ಜೆಟ್ ಸಿಗದಿ ಆಗದಿರುವುದು ಮತ್ತು ಮೂರನೆಯದು ನದಿಯಲ್ಲಿ 60 ಕ್ಯೂಸೆಕ್ಸ್ ನೀರು ಬಂದರೆ ಸಾಧ್ಯ, ಇಲ್ಲದಿದ್ದರೆ ಸಾಧ್ಯವೆಲ್ಲ ಎಂಬುದು. ಇಷ್ಟು ನೀರು ಬರುತ್ತದೆಯೇ, ಇಲ್ಲವೇ ಎಂದು ಒಂದು ವರ್ಷ ಕಾದುನೋಡಿ ಪರಿಶೀಲಿಸಿ ಮುಂಜೂರುಮಾಡಬೇಕು.

ಶ್ರೀ ಮಾಲ ಮರಿಯಪ್ಪ.—60 ಕ್ಯೂಸೆಕ್ಸ್‌ಗಿಂತ ಕಡಮೆ ಬಂದರೆ ಕೃಪಾಸಿಟಿ ಕಡಮೆಮಾಡಿ ಕಟ್ಟಬಹುದಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರಿಶೀಲಿಸಬಹುದು.

ಶ್ರೀ ಮಾಲ ಮರಿಯಪ್ಪ.—ತಾವು ಹೇಳಿದ ಇನ್ನೊಂದು ಅನಿವಾರ್ಯ ರೈತರು ಹೆಚ್ಚು ಕಾಂಟ್ರಿಬ್ಯೂಷನ್ ಕೊಡಬೇಕೆಂದು. ಅದಕ್ಕೆ ಸಿದ್ಧವಾಗಿದ್ದರೆ ಪರಿಶೀಲಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಆಗಬಹುದು.

Honnemaradu Hydro-Electric Project.

Q.—36. **Sri A. V. NARASIMHA REDDY** (Bangalore South).—

Will the Government be pleased to state :—

(*a*) whether they have taken up the construction of the Hydro-Electric Project at Honnemaradu ;

(*b*) (*i*) whether an estimate is prepared for the same ;

(*ii*) if the answer is in the affirmative, the total cost of the estimate and the time required for construction ?

A.—**Sri H. M. CHANNABASAPPA** (Minister for Industries).—

(*a*) Preliminary work on the project has been started.

(*b*) (*i*) Yes.

(*ii*) Rs. 3,945 lakhs. The first stage of the project with one unit of 71,000 K.W. is expected to be completed by the close of the Second Five-Year Plan. No date can now be set for the completion of the whole scheme.

Sri A. V. NARASIMHA REDDY.—What is the cost that you will have to incur at the first stage of the implementation of this project ?

***Sri H. M. CHANNABASAPPA.**—Rs. 22·97 crores.

Sri A. V. NARASIMHA REDDY.—In view of the acute shortage of power in the State, will the Government expedite this matter and see that the first stage of the project is completed within two years ?

Sri H. M. CHANNABASAPPA.—It is an impossibility.

Sri A. V. NARASIMHA REDDY.—What are the difficulties in the way ?

Sri H. M. CHANNABASAPPA.—To spend Rs. 22·97 crores within five years means spending at least Rs. 1¼ lakhs per day within six hours. You can yourself calculate the amount of money that will have to be spent within a day, if the first stage is to be completed in two years.

Sri A. V. NARASIMHA REDDY.—When was this estimate finalised ?

Sri H. M. CHANNABASAPPA.—The estimate was finalised and included in the Second Five-Year Plan.

Sri A. V. NARASIMHA REDDY.—Why was it not included even at the closure of the First Five-Year Plan ?

Sri H. M. CHANNABASAPPA.—Until it was approved by the Planning Commission, we could not take up the works.

Sri A. V. NARASIMHA REDDY.—When was it approved ?

Sri H. M. CHANNABASAPPA.—Very recently.

Sri A. V. NARASIMHA REDDY.—Has not the Central Planning Commission advanced some loan for some of the electric projects in the State previously during the First Five-Year Plan ?

Sri H. M. CHANNABASAPPA.—Not for this project anyway.

Sri M. PALANIYAPPAN.—Have you got money to complete the first stage within five years ?